


ಅದೀಗ ಹುಟ್ಟಿದ ಜಿಂಕೆಮರಿಗಳಿಗೆ ನಿನ್ನ ಲಾಲಿ ಸಿಕ್ಕಲಿ
ಆ ಮರಿಗಳ ಜೊತೆ ನನಗೂ ನಿನ್ನ ತೊಡೆತೊಟ್ಟಿಲು ಸಿಕ್ಕಲಿ

ಯಾವುದೋ ಒಂದು ಜಾಗದಲ್ಲಿ ಯಾವುದೋ
ಒಂದು ಗಳಿಗೆಯಲ್ಲಿ ಯಾವುದೋ ಒಂದು
ಭಾವದಲ್ಲಿ ಯಾವುದೋ ನೋವಿನಲ್ಲಿ ಯಾವುದೋ
ಒಂದು ನಿರ್ಭಾವದಲ್ಲಿ
ನೀ ನನಗೆ ಸಿಕ್ಕಲಿ ಸಿಕ್ಕದಿರಲಿ
ನೀನು ಮಾತ್ರ ಈ ಲೋಕದಲ್ಲಿ ಎಲ್ಲ ಕಡೆ ಇರಲಿ

# ಆಲ್ಫಾ ವೂಲ್ಫ್

ಮನ್ವಂತರಗಳು ಕ್ಷಣಗಳಾಗಿ ಉರುಳಿಬೀಳುವ ಹೊತ್ತಲ್ಲಿ
ಆದಿಮ ನೋವುಗಳಿಗೆಲ್ಲ ಹೊಸ ಜೀವ ಬಂದು
ಇಲ್ಲಿ ನಾವು ಬದುಕಿದ ಜಗದಲ್ಲಿ
ಜಾತಿಗಳಾಗಿ ಧರ್ಮಗಳಾಗಿ ವಂಚನೆಗಳಾಗಿ ಹುಟ್ಟಿದವು

ನೀ ನನ್ನ ತುಳಿದೆ
ನಾ ಹೂತೆ
ನನ್ನ ಕಾಲ ಕೆಳಗೆ ಜ್ವಾಲಾಮುಖಿಗಳಿದ್ದವು ಎದ್ದವು ಎಬ್ಬಿಸಿದವು

ನಾ ನಿನ್ನ ಅಂಗಳದಲ್ಲಿ ಸಹಜವಾಗಿಯೇ ಉಗುಳಿದೆ
ನೀ ನಿನ್ನ ಮನೆಯ ಮನದ ಹೇಸಿಗೆಗೆಂದು ತಿಳಿದೆ
ನನ್ನ ಬಾರಿಸಿದೆ ಬಾರುಕೋಲಿನಿಂದ
ಬೆನ್ನ ಮೇಲಿನ ಬಾಸುಂಡೆಗಳು ಎದೆಯೊಳಗೆ
ಆಕ್ರೋಶದ ರಂಗೋಲಿ ಬಿಡಿಸಿದವು
ನಾ ಉಗುಳಿದ ಉಗುಳಿನ ಮೇಲೆ ನನ್ನ ರಕುತದ
ಹನಿಗಳು ಉದುರಿದವು
ನಿನ್ನ ಆತ್ಮಕ್ಕೆ ಶಾಂತಿ ಸಿಕ್ಕಿತು

ನಿನ್ನ ಹೊಲದಲ್ಲಿ ನನ್ನ ಕುರಿ ಮೇಯಿತು
ನೀನು ನನ್ನ ಕೊಂಡವಾಡದಲ್ಲಿ ಬಂಧಿಸಿ
ನಿನ್ನ ಹೋರಿಯಿಂದ ನನ್ನ ಗುದ್ದಿಸಿದೆ ಕೈಕಾಲು ಮುರಿದೆ
ನಿನ್ನ ಹೃದಯ ಸಂಭ್ರಮದಿಂದ ಕುಣಿದಾಡಿತು
ಈಗ ಯಾವ ಆಸ್ಪತ್ರೆಯಲ್ಲೂ ನಿನ್ನ ಹಿಡಿಯುತಿಲ್ಲ

ನಾನು ನನ್ನ ಮದುವೆಯಲ್ಲಿ ಕುದುರೆ ಆನೆ
ಒಂಟೆಗಳ ತರಿಸಿದೆ
ನನ್ನ ಓಣಿಯ ಸಂಗೀತದ ಸದ್ದು
ನಿನ್ನ ಓಣಿಯವರ ನಿದ್ದೆ ಕೆಡಿಸಿತು
ನನ್ನ ಮದುವೆಯ ದಿಬ್ಬಣ ಸ್ಮಶಾನವಾಯಿತು
ನಾನೂ ಇದ್ದೆ ನಿನ್ನವರೇ ತುಂಬಾ ಜನ ಇದ್ದರು

